ಆಗುತ್ತಾ. ಉಳಿದದ್ದು ಮಾಮೂಲು ಎಲ್ಲಾರು ಹಂಚಿಕೊಳ್ಳೋದು. ಬಿಲ್ ಮಾತ್ರ ಅಷ್ಟು ಕೋಟಿಗೆ ಮಾಡಬೇಕು. ಅದಕ್ಕ ಮಾಡೋರು ಇದ್ದಾರ. ಅದೆಲ್ಲಾ ಜಿಲ್ಲಾಧಿಕಾರಿ ಮಾಡ್ತಾರ. ಪರಸೆಂಟೇಜ್ ಬಾಳ ಕೇಳ್ತಾನ ಕೊಟ್ಟರಾಯಿತು. ನಿನಗಂತೂ ಒಂದು ಮನೆ ಆತದ.'

'ಏನಪಾ... ಹೇಲಗುಂಡ್ಯಾಗ ಬಿದ್ದವನ ಈ ಮಟ್ಟಕ್ಕ ತಂದೀರಿ. ನೀವಾ ಚುನಾವಣ್ಯಾಗ ನಿಲ್ಲಸೀರಿ ಗೆಲ್ಲಿಸೀರಿ. ಜಿಲ್ಲಾ ಪಂಚಾಯಿತ್ ಅಧ್ಯಕ್ಷರನ್ನ ಮಾಡೀರಿ.'

'ಅದಿರಲಿ. ಮನೀಗಿ ಎಷ್ಟು ಖರ್ಚಾತದ ಅಂದಾನ ಇಂಜಿನಿಯರ್. ಅವ ಬಾಳ ಚದಮಾನ. ಒಂದಕ್ಕ ಎರಡು ಹೇಳಿ ತಲಿಮ್ಯಾಲ ಚೆಪ್ಪಡಿ ಎಳಿತಾನ. ಅವನು ದುಡ್ಡು ಕೇಳಿದರ ನನ್ನ ಹತ್ತಿರ ಕಳಿಸು.'

'ಆಯಿತಪ. ಎರಡು ಕೋಟಿ ಆಗಬಹುದು ಅಂದಾನಪ.'

'ಆಗಲಿ ತಗೋ... ಜಿಲ್ಲಾ ಪಂಚಾಯಿತಿ ಅಧ್ಯಕ್ಷನಿಗೆ ಅಷ್ಟು ಮನೆ ಬೇಕು. ದುಡ್ಡಿನ ಬಗ್ಗೆ ಚಿಂತಿ ಮಾಡಬ್ಯಾಡ. ಆದರ ಮುಂದಿನ ಚುನಾವಣೆಗೆ ತಯಾರಾಗಬೇಕು. ನಮ್ಮ ಪರವಾಗಿ ಕೆಲಸ ಮಾಡೋ ಯುವ ಪಡೆ ಕಟ್ಟಬೇಕು. ಅದಕ್ಕ ಈ ಪ್ರಾಜೆಕ್ಟನ್ನ ತುಂಡು ಗುತ್ತಿಗೆ ಕೊಟ್ಟು ಬಿಡೋಣ.'

'ಎಲ್ಲಾ ನಿಮ್ಮ ಎಂಜಲಪ್ಪೋ... '

'ಮೀಸಲಾತಿ ಇರತನಕ ನೀನೆ ಅಧಿಕಾರದಾಗ ಇರಬೇಕು. ಬೇಕಾದ ವ್ಯವಸ್ಥಾ ನಾವು ಮಾಡ್ತೀವಿ. ಆ ಗೋಣಿಚೀಲ ತಗೋ ಅದ್ರಾಗ ಒಂದು ಹತ್ತು ಲಕ್ಷ ಐದಾವ. ಮನ್ಯಾಗ ಎಲ್ಲಾನ ಭದ್ರ ಇಡು. ಹೆಂಡತಿಗೆ ಸಮೇತಿ ಗೊತ್ತಾಬಾರದು.'

'ಸರೆಪಾ ...' ಎಂದು ಕಾಲು ಮುಟ್ಟಿ ನಮಸ್ಕರಿಸಿದ

'ಆ ರಂಜನ್ ಸಾಹೇಬರು ಕೊಟ್ಟ ವಿಸ್ಕಿನ್ನ ಹೆಂಡ ಕುಡಿದಂಗ ಕುಡಿಬ್ಯಾಡಲೆ... ನಿಧಾನಕ್ಕ ಒಂದೊಂದ ಸಿಪ್ಪು ಕುಡಿಬೇಕು. ಮಜಾ ಬರ್ತಾದ.'

'ಎಲ್ಲಾ ತಮ್ಮ ಪಾದಪ್ಪೋ...'

'ಅವನು ಅಮರೇಶ ನಿನ್ನ ಹತ್ತಿರ ಬರ್ತಾನ. ಅವನಿಗಿಷ್ಟು ರೊಕ್ಕ ಕೊಟ್ಟು ಕಳಿಸು. ಅವನು ಬರೀ ಚಿಲ್ಲರಕ್ಕ ಬಿದ್ದಾನ. ಅದರಿಂದ ನಮ್ಮೆಸರು ಕೆಡ್ತದ. ಏನು ಮಾಡಿದರೂ ಬೆಣ್ಣ್ಯಾಗ ಕೂದಲು ತೆಗದಂಗ ಇರಬೇಕು. ಇನ್ನೊಂದು ನೆನಪ್ಪಿಟ್ಟುಕೋ. ಕೇರಿ ಮರಿಬ್ಯಾಡ. ಕೇರಿ ಕಡೆ ಹೋಗ್ತೀರು. ಅಲ್ಲಿನೇ ಸಾಲಿಡ್ ಓಟುಗಳು.'



'ಆಯಿತಪ್ಪೋ ಹೋಗ್ತಿನಿ' ಎಂದು ಗೋಣಿ ಚೀಲವನ್ನು ತಗಂಡು ಎದ್ದು ಕಾರಿನ ಕಡೆ ಬಂದ. ಗೌಡರು ಸಣ್ಣ ನಗೆ ಬೀರುತ್ತಾ ಮೆಟ್ಟಲಿಳಿದು ಕಾರಿನವರೆಗೆ ಬಂದು ಕಳಿಸಿದರು.

ಕಾರಿನಲ್ಲಿ ಕುಳಿತವನೆ 'ಕೇರಿ ಕಡೆ ನಡಿಯಲೆ. ಅಮರೇಶನ್ನ ಭೇಟಿಯಾಗಿ ಹೋಗಮು. ಇಲ್ಲಂದರ ಅವನು ನಮ್ಮ ಕೈಯಿಗಿ ಸಿಗಾದಿಲ್ಲ.' ಎಂದು ಸೀಟನ್ನ ಹಿಂದಕ್ಕ ಮಾಡಿಕೊಂಡು ಒಂದೆರಡು ಗೋಡಂಬಿ ಬಾಯಿಗಿ ಹಾಕ್ಕಂಡ.

ಕೇರಿ ಮುಂದ ಬಂದು ಕಾರು ನಿಂತಿತು. ಕಾರಿನಿಂದ ಇಳಿದು ಕೇರಿ ಕಡೆ ಒಮ್ಮೆ ನೋಡಿದ. ಕೋಳಿಗಳು ಕಸ ಕೆದರಿ ತಿನ್ನುತ್ತಿದ್ದವು. ಹಂದಿಗಳು ಕೊಳಚೆ ನೀರಿನಲ್ಲಿ ಮುಖ ಹಾಕಿ ಗರ್ ಗರ್ ಎನ್ನುತ್ತಿದ್ದವು. ಅಲ್ಲೇ ಹುಡುಗರು ಹೇಲಾಕ ಕುಂತಿದ್ದರು. ಹುಡುಗರು ಹೇತಿದ್ದೇ ತಡ ಹಂದಿಗಳು ಗಬಕ್ಕನ ಹೇಲನ್ನು ಮೃಷ್ಟಾನ್ನ ಭೋಜನವೆಂಬಂತೆ ತಿನ್ನುತ್ತಿದ್ದವು. ಹುಡುಗರು ಮತ್ತೆ ಕುಂಡೆ ಸರಿಸಿ ಕೂಡುತ್ತಿದ್ದರು. ಅಲ್ಲಲ್ಲಿ, ಎಮ್ಮೆಗಳು, ಕುರಿಗಳನ್ನು ಕಟ್ಟಿದ್ದರು. ಸಣ್ಣ ಗೂಡಿನಂತ ಜನತಾ ಮನೆಗಳು ಅಲ್ಲಲ್ಲಿ ಬಿರುಕು ಬಿಟ್ಟು ನಿಂತಿದ್ದವು. ಕೇರಿಯೆಂಬೋ ಕೇರಿ ದುರ್ನಾತದಿಂದ ಮೆರೆಯುತಿತ್ತು. ದುರುಗಪ್ಪ ಸಾಹುಕಾರರಿಗೆ ನೋಡಿ ಹೊಟ್ಟೆ ತೊಳಿಸಿದಂತಾಯಿತು.